ದಿನಾಂಕ 07.10.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ  ಬೋಧಿಸಲಾಯಿತು.

ಪಾಟೀಸವಾಲು :- ಶ್ರೀ.ಎಂ. ಎಂ. ವಕೀಲರಿಂದ 6 ನೇ ಎದುರುದಾರರ ಪರವಾಗಿಃ

4. ಡಿ. ಮಂಜು ಎನ್ನುವವರು ನನ್ನ ಮತ್ತು ಇತರರ ವಿರುದ್ದ ಪಾಲಿಗಾಗಿ ದಾವೆ ಹೂಡಿದ್ದರು ಎಂದರೆ ಸಾಕ್ಷಿ ಹೌದು, ಸದರಿ ದಾವೆ 2021 ರಲ್ಲಿ ನಮ್ಮಂತೆಯೇ ತೀರ್ಮಾನವಾಗಿದೆ ಎಂದು ನುಡಿದಿದ್ದಾರೆ. ಸದರಿ ತೀರ್ಪಿನ ವಿರುದ್ದ ಮೇಲ್ಮನವಿ ಸಲ್ಲಿಸಲಾಗಿದೆ ಎಂದರೆ ಸಾಕ್ಷಿ ಹೌದು, ಅದು ಇಷ್ಟರಲ್ಲಿ ತೀರ್ಮಾನವಾಗಬಹುದು ಎಂದು ನುಡಿದಿದ್ದಾರೆ. ನನ್ನ ಪತಿಯ ಮೊದಲನೇಯ ಹೆಂಡತಿಯ ಹೆಸರು ಚಿಕ್ಕತಾಯಮ್ಮ ಅಲಿಯಾಸ್ ದೇವಮ್ಮ ಆಗಿತ್ತು. ತನ್ನ ಮೊದಲನೇಯ ಪತ್ನಿಯ ಮರಣಾನಂತರ ನನ್ನ ಪತಿ ಪುಟ್ಟೀರಮ್ಮ ಎನ್ನುವವರನ್ನು ಮದುವೆಯಾಗಿದ್ದು ಎಂದರೆ ಸರಿಯಲ್ಲ.  ಸದರಿ ಪುಟ್ಟೀರಮ್ಮ ಮರಣಾಂತರ ನನ್ನ ಪತಿ ನನ್ನನ್ನು ಮದುವೆಯಾದರು ಎಂದರೆ ಸರಿಯಲ್ಲ. ಮೊದಲನೇ ಪತ್ನಿ ದೇವಮ್ಮನ ಮರಣದ 3 ತಿಂಗಳಿಗೆ 1976 ನವೆಂಬರ್ ತಿಂಗಳಿನಲ್ಲಿ ನನ್ನ ಪತಿ ನನ್ನನ್ನು ಮದುವೆಯಾದರು ಎಂದು ಸಾಕ್ಷಿ ಸ್ವತಃ ನುಡಿದಿದ್ದಾರೆ. ನನಗೆ ಸೋಮಶೇಖರ್ ಎನ್ನುವ ಒಬ್ಬ ಮಗ ಮಾತ್ರ ಇದ್ದಾನೆ. ಪುಟ್ಟೀರಮ್ಮನ ಮೂಲಕ ನನ್ನ ಪತಿಗೆ ಡಿ.ಮಂಜು, ಜಯಮ್ಮ, ಬೋರಮ್ಮ, ಗೌರಿ ಎನ್ನುವ 4 ಜನ ಮಕ್ಕಳು ಆಗಿದ್ದರು ಎಂದರೆ ಸರಿಯಲ್ಲ. ನನ್ನ ಪತಿಗೆ ಮೊದಲನೇ ಹೆಂಡತಿಯಿಂದ ಸೀತಾ, ಸುನೀತಾ, ಗಿರಿಜಾ ಎನ್ನುವ 3 ಜನ ಮಕ್ಕಳು ಆಗಿರುತ್ತಾರೆ ಎಂದರೆ ಸರಿ.

5. ನಾನು ಹೇಳಿದಂತೆ ದಿಃ 27.09.2001 ರಂದು ನನ್ನ, ನನ್ನ ಪತಿ ಹಾಗೂ ಮಗನ ನಡುವೆ ನೊಂದಾಯಿತ ವಿಭಾಗ ಪತ್ರ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಮೂಲಕ ಸ.ನಂ. 577/1 ರಲ್ಲಿ 14 ಗುಂಟೆ 544/8 ರಲ್ಲಿ 21 ಗುಂಟೆ ಹಾಗೂ 576 ರಲ್ಲಿ 2 ಗುಂಟೆ ನನ್ನ ಪಾಲಿಗೆ ಬಂದಿತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ರಸ್ತೆಗಾಗಿ ಭೂಸ್ವಾಧೀನವಾದ ಸ..ನಂ. 577/1 ರ 4 ಮುಕ್ಕಾಲು  ಗುಂಟೆ ಜಮೀನಿನ ಬಾಬ್ತು ಪರಿಹಾರಕ್ಕೆ ಡಿ. ಮಂಜು ಸಹ ಅರ್ಹರು ಎಂದರೆ ಸರಿಯಲ್ಲ. ಸಾಧ್ಯವಾದರೆ ಪರಿಹಾರದ ಹಣವನ್ನು ನಾನು ಒಬ್ಬಳೇ ಧಕ್ಕಿಸಿಕೊಳ್ಳಬೇಕೆಂದು ಮಂಜುವಿಗೆ ಯಾವುದೆ ಹಕ್ಕು ಇಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು :- ಶ್ರೀ. ಎಸ್ ಜೆ  ವಕೀಲರಿಂದ 1 ನೇ ಎದುರುದಾರರ ಪರವಾಗಿಃ

6. ರಸ್ತೆಗಾಗಿ ಭೂಸ್ವಾಧೀನವಾದ ಜಮೀನು ಬಾಬ್ತು 8,66,021/- ರೂ ಹಣವನ್ನು ನನಗೆ ಚೆಕ್ಕು ಮೂಲಕ ಕೊಡಲಾಗಿದೆ ಎಂದರೆ ಸರಿ. ಸ.ನಂ.577/1 ರ ಸ್ವಾಧೀನವಾದ 280 ಚದರ ಅಡಿ ಬಾಬ್ತು

ಪರಿಹಾರವನ್ನು ನನಗೆ ಕೊಡಲಾಗಿದೆ ಎಂದರೆ ಸಾಕ್ಷಿ ನನಗೆ ಎರಡೂ ಮೂಕ್ಕಾಲು ಗುಂಟೆ ಸ್ವಾಧೀನವಾದ ಜಮೀನನ ಬಾಬ್ತು ಸ್ವಲ್ಪ ಪರಿಹಾರವನ್ನು ಕೊಟ್ಟಿದ್ದು, ಅದರಲ್ಲಿರುವ ಮರ ಹಾಗೂ ಉಳಿದ 2 ಗುಂಟೆ ಜಮೀನಿನ ಹಾಗೂ ಸ.ನಂ. 576 ರ ಬಾಬ್ತು ಪರಿಹಾರ ಮಾತ್ರ ಬರಬೇಕಾಗಿದೆ ಎಂದು ನುಡಿದಿದ್ದಾರೆ. ಸ.ನಂ.577/1 ರಲ್ಲಿ ನನಗೆ ಸೇರಿದ 4 ಮುಕ್ಕಾಲು ಗುಂಟೆ ಜಮೀನು ಸ್ವಾಧೀನವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸೇರಿದ 577/1 ರ 4 ಮುಕ್ಕಾಲು ಗುಂಟೆ ಜಮೀನು ಸ್ವಾಧೀನವಾಗಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸ.ನಂ.577/1 ರಲ್ಲಿ ಕೇವಲ 280 ಚದರ ಅಡಿ ಮಾತ್ರ ಸ್ವಾಧೀನವಾಗಿದೆ ಎಂದರೆ ಸರಿಯಲ್ಲ. ಸ.ನಂ.577/1 ರ ಬಾಬ್ತು ನನಗೆ ಯಾವುದೇ ಪರಿಹಾರ ಬರಬೇಕಾಗಿಲ್ಲ ಎಂದರೆ ಸರಿಯಲ್ಲ.

7. ನನಗೆ ಯಾವುದೇ ಪರಿಹಾರ ಬರಬೇಕಾಗಿಲ್ಲವಾದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸ.ನಂ.577/1 ರಲ್ಲಿ ಸ್ವಾಧೀನವಾದ ಜಮೀನಿನ ಬಾಬ್ತು ನನಗೆ ಕೊಡಬೇಕಾದ ಪರಿಗಿಜಹಾರವನ್ನು ಈಗಾಗಲೇ ಕೊಡಲಾಗಿದೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ. ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.